ಪ್ರಜಾ ಭಾರತ

ಕನ್ನಡ ದಿನಪತ್ರಿಕೆ ಸತ್ಯದ ಪರ - ಪ್ರಜೆಗಳ ಧ್ವನಿ..!



ನಾನೇ ಸರ್ಕಾರ, ನಾನು ಹೇಳಿದ್ದೇ ಫೈನಲ್, 60 ರೂ.ಗೆ 2 ಲಾಡು ಕೊಡ್ಬೇಕು: ಸಚಿವ ಶಿವಲಿಂಗೇಗೌಡ ಗರಂ

ಸಂಪಾದಕ: ದಿನೇಶ್ ಬೆಳ್ಳಾವರ, ಮೊ: 94821 01707 Email. prajabharathanews@gmail.com ಸಹ ಸಂಪಾದಕ : ಬಿ.ಬಿ ಶಿವರಾಜು, ಮೊ: 98809 08468

Volume-01 Issue-60 HASSAN Date : 31.10.2026 SATURDAY Reg No.PRGI No. KNKAN/26/A6168 Page-02 Rs.1.00

ಸಂಪುಟ-01 ಸಂಚಿಕೆ-60 ಹಾಸನ ದಿನಾಂಕ: 31.10.2026 ಶನಿವಾರ ರಿ.ನಂ.PRGI No. KNKAN/26/A6168 ಪುಟ:02 ಬೆಲೆ:1.00ರೂ.

ಹಾಸನಾಂಬೆ ದರ್ಶನಕ್ಕೆ ಹರಿದುಬಂದ ಭಕ್ತಸಾಗರ

ಧರ್ಮದರ್ಶನಕ್ಕೆ ಸಮಯ ನಿಗದಿ ಅಸಾಧ್ಯ; ಲಾಡು ಪ್ರಸಾದ ರೂ.60ಕ್ಕೆ ವಿತರಿಸಲು ಸಚಿವ ಶಿವಲಿಂಗೇಗೌಡ ಸೂಚನೆ

ಪ್ರಜಾ ಭಾರತ ವರದಿ

ಹಾಸನ: ಐತಿಹಾಸಿಕ ಹಾಸನಾಂಬೆ ದೇವಿ ದರ್ಶನೋತ್ಸವದ ಮೊದಲ ದಿನದಿಂದಲೇ ಭಕ್ತಸಾಗರ ಹರಿದುಬಂದಿದ್ದು, ಧರ್ಮದರ್ಶನದ ಸರತಿ ಸಾಲಿನಲ್ಲಿ ಬರುವ ಭಕ್ತರಿಗೆ ಪ್ರತ್ಯೇಕ ಸಮಯ ನಿಗದಿಪಡಿಸಲು ಸಾಧ್ಯವಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಸ್ಪಷ್ಟಪಡಿಸಿದರು.

ಲಕ್ಷಾಂತರ ಭಕ್ತರು ದರ್ಶನಕ್ಕೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಎಲ್ಲರಿಗೂ ನಿರ್ದಿಷ್ಟ ಸಮಯ ನೀಡುವುದು ಕಾರ್ಯಸಾಧ್ಯವಲ್ಲ. ವಿಶೇಷ ಹಾಗೂ ವಿಐಪಿ ಪಾಸ್ ಹೊಂದಿರುವವರಿಗೆ ತ್ವರಿತ ದರ್ಶನದ ಅವಕಾಶವಿದ್ದು, ಸಾಮಾನ್ಯ ಸರತಿ ಸಾಲಿನ ಭಕ್ತರು ತಾಳ್ಮೆಯಿಂದ ಕಾಯ್ದು ದೇವಿಯ ದರ್ಶನ ಪಡೆಯಬೇಕು ಎಂದು ಮನವಿ ಮಾಡಿದರು.

● ಬಡ ಭಕ್ತರ ಹಿತದೃಷ್ಟಿಯಿಂದ ಲಾಡು ದರ ಇಳಿಕೆ

ಹಾಸನಾಂಬೆ ದೇವಾಲಯದಲ್ಲಿ ಲಾಡು ಪ್ರಸಾದದ ದರವನ್ನು ರೂ.100ರಿಂದ ರೂ.60ಕ್ಕೆ ಇಳಿಸಿ ವಿತ-ರಿಸುವಂತೆ ಸಚಿವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಸಾಮಾನ್ಯ ಹಾಗೂ ಬಡ ಭಕ್ತರಿಗೆ ರೂ.100 ನೀಡಿ ಲಾಡು ಖರೀದಿಸುವುದು ಹೊರೆಯಾಗಬಾರದು ಎಂಬ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ.

ಇಸ್ಕಾನ್ ಸಂಸ್ಥೆಗೆ ಪ್ರತಿ ಲಾಡಿಗೆ ರೂ.56ರಂತೆ





ಟೆಂಡರ್ ನೀಡಲಾಗಿದೆ. ಚಿಲ್ಲರೆ ಸಮಸ್ಯೆ ತಪ್ಪಿಸಲು ರೂ.60ಕ್ಕೆ ಮಾರಾಟ ಮಾಡುವಂತೆ ಸೂಚಿಸಲಾಗಿದೆ. ಪ್ರಸಾದ ಮಾರಾಟವನ್ನು ಲಾಭದ ಉದ್ದೇಶಕ್ಕಿಂತ ಭಕ್ತರ ಅನುಕೂಲಕ್ಕೆ ಆದ್ಯತೆ ನೀಡಿ ನಡೆಸಬೇಕು ಎಂದು ಸಚಿವರು ತಿಳಿಸಿದರು.

● ಮೊದಲ ದಿನವೇ ಭಕ್ತರ ದಂಡು

ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಮೊದಲ ದಿನದಿಂದಲೇ ಭಕ್ತರ ಸಂಖ್ಯೆ ಹೆಚ್ಚಾಗಿದೆ. ಮುಂಜಾನೆ 3 ಗಂಟೆಯಿಂದಲೇ ಧರ್ಮದರ್ಶನದ ಸರತಿ ಸಾಲಿನಲ್ಲಿ ಭಕ್ತರು ನಿಂತಿದ್ದರು.

ಬೆಳಗ್ಗೆಯೇ ರೂ.300 ಹಾಗೂ ರೂ.1,000 ವಿಶೇಷ ದರ್ಶನದ ಸರತಿ ಸಾಲುಗಳು ಭರ್ತಿಯಾಗಿದ್ದು, ದೇವಿಯ ದರ್ಶನಕ್ಕೆ ಗಂಟೆಗಟ್ಟಲೆ ಕಾಯುವ ಪರಿಸ್ಥಿತಿ ನಿರ್ಮಾಣವಾಗಿತ್ತು.

ಭಕ್ತರ ಸುರಕ್ಷತೆ ಮತ್ತು ಸುಗಮ ಸಂಚಾರಕ್ಕಾಗಿ ಜರ್ಮನ್ ಟೆಂಟ್‌ಗಳನ್ನು ಅಳವಡಿಸಲಾಗಿದ್ದು, ನೂಕುನುಗ್ಗಲು ತಡೆಯಲು ಬ್ಯಾರಿಕೇಡ್‌ಗಳನ್ನು ನಿರ್ಮಿಸಲಾಗಿದೆ. ಪೊಲೀಸ್ ಇಲಾಖೆ ಹಾಗೂ ಅಧಿಕಾರಿಗಳು ಸ್ಥಳದಲ್ಲೇ ನಿಗಾ ವಹಿಸಿದ್ದರು. ಸಚಿವ ಕೆ.ಎಂ. ಶಿವಲಿಂಗೇಗೌಡ ದೇವಸ್ಥಾನದ ಸುತ್ತಮುತ್ತಲಿನ ವ್ಯವಸ್ಥೆಗಳನ್ನು ಪರಿಶೀಲಿಸಿದರು.

ಮೊದಲ ದಿನದ ಆದಾಯ ರೂ.51.36 ಲಕ್ಷ

ದರ್ಶನೋತ್ಸವದ ಮೊದಲ ದಿನ ರಾತ್ರಿ 8 ಗಂಟೆಯಿಂದ ಎರಡನೇ ದಿನ ಬೆಳಗ್ಗೆ 8 ಗಂಟೆಯವರೆಗೆ ಒಟ್ಟು ರೂ.51,36,400 ಆದಾಯ ಸಂಗ್ರಹವಾಗಿದೆ. ಇದರಲ್ಲಿ ರೂ.300 ಟಿಕೆಟ್ ಮಾರಾಟದಿಂದ ರೂ.14,43,600, ರೂ.1,000 ಟಿಕೆಟ್ ಮಾರಾಟದಿಂದ ರೂ.35,97,000 ಹಾಗೂ ಲಾಡು ಪ್ರಸಾದ ಮಾರಾಟದಿಂದ ರೂ.95,800 ಆದಾಯ ಬಂದಿದೆ.

ಬೆಳಗ್ಗೆ 8ರಿಂದ 10 ಗಂಟೆಯವರೆಗೆ ಗೋಲ್ಡನ್ ಪಾಸ್ ಹೊಂದಿದವರಿಗೆ ಹಾಗೂ 10.30ರಿಂದ ಮಧ್ಯಾಹ್ನ 12.30ರವರೆಗೆ ಶಿಷ್ಟಾಚಾರದ ಮೂಲಕ ಆಗಮಿಸಿದ ಗಣ್ಯರಿಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿ-ತ್ತು. ಬೆಳಗಿನ ಅವಧಿಯಲ್ಲಿ ವಿಶೇಷ ದರ್ಶನದ ಸರತಿಯೂ ಭರ್ತಿಯಾಗಿತ್ತು. ಮಧ್ಯಾಹ್ನದ ನಂತರ ಭಕ್ತರ ಸಂಖ್ಯೆ ಕಡಿಮೆಯಾಗಿ ಕೆಲವು ಸರತಿ ಸಾಲುಗಳು ಖಾಲಿಯಾಗಿದ್ದವು.

ವಿಶೇಷ ದರ್ಶನದ ಟಿಕೆಟ್ ಹೊಂದಿದ ಭಕ್ತ-ರಿಗೆ ಎರಡು ಲಾಡುಗಳನ್ನು ನೀಡಲಾಗುತ್ತಿದ್ದು, ಧರ್ಮದರ್ಶನಕ್ಕೆ ಬರುವ ಸಾಮಾನ್ಯ ಭಕ್ತರಿಗೂ ಕೈಗೆಟುಕುವ ದರದಲ್ಲಿ ಪ್ರಸಾದ ಲಭ್ಯವಾಗುವಂತೆ ಮಾಡಲು ದರ ಕಡಿತದ ಕ್ರಮ ಕೈಗೊಳ್ಳಲಾಗಿದೆ.

ಭಕ್ತರಿಗೆ ತ್ವರಿತ ದರ್ಶನ ಕಲ್ಪಿಸಲು ಸಕಲ ಪ್ರಯತ್ನ: ಸಚಿವ ಶಿವಲಿಂಗೇಗೌಡ

ಪ್ರಜಾ ಭಾರತ ವರದಿ




ಹಾಸನ: ಐತಿಹಾಸಿಕ ಹಾಸನಾಂಬೆ ಉತ್ಸವಕ್ಕೆ ಆಗಮಿಸುವ ಲಕ್ಷಾಂತರ ಭಕ್ತರಿಗೆ ಶಾಂತಿಯುತವಾಗಿ ದೇವಿಯ ದರ್ಶನ ಪಡೆಯಲು ಅಗತ್ಯ ವ್ಯವಸ್ಥೆ ಮಾಡಲಾಗಿದೆ. ಆದರೆ ಧರ್ಮದರ್ಶನದ ಸರತಿ ಸಾಲಿನಲ್ಲಿ ಬರುವ ಭಕ್ತರಿಗೆ ಪ್ರತ್ಯೇಕ ಸಮಯ ನಿಗದಿಪಡಿಸಲು ಸಾಧ್ಯವಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ತಿಳಿಸಿದರು.

ಸಾಮಾನ್ಯ ಸರತಿ ಸಾಲಿನ ಭಕ್ತರಿಗೂ ಸಮಯ ನಿಗದಿಪಡಿಸಬೇಕೆಂಬ ಬೇಡಿಕೆಗೆ ಪ್ರತಿಕ್ರಿಯಿಸಿದ ಅವರು, ವಿಐಪಿ ಹಾಗೂ ವಿಶೇಷ ದರ್ಶನದ ಪಾಸ್ ಹೊಂದಿರುವವರಿಗೆ ತ್ವರಿತ ದರ್ಶನದ ಅವಕಾಶವಿದೆ. ಆದರೆ ಧರ್ಮದರ್ಶನಕ್ಕೆ ಬರುವ ಲಕ್ಷಾಂತರ ಭಕ್ತ-ರಿಗೆ ಸಮಯ ನಿಗದಿಪಡಿಸುವುದು ಕಷ್ಟಸಾಧ್ಯ. ಆದ್ದರಿಂದ ಭಕ್ತರು ಸಹಕರಿಸಿ, ಶಾಂತಚಿತ್ತದಿಂದ ದೇವಿಯ ದರ್ಶನ ಪಡೆಯಬೇಕು ಎಂದು ಮನವಿ ಮಾಡಿದರು.

ಭಕ್ತರು ಸರತಿ ಸಾಲಿನಲ್ಲಿ ಹೆಚ್ಚು ಸಮಯ ಕಾಯುವುದನ್ನು ತಪ್ಪಿಸಿ, ತ್ವರಿತವಾಗಿ ದರ್ಶನ ಪಡೆಯುವಂತೆ ಸಕಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ದಿನದ 24 ಗಂಟೆಯೂ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿದ್ದು, ಹೆಚ್ಚಿನ ಅರ್ಚಕರನ್ನು ನಿಯೋಜಿಸುವ ಮೂಲಕ ನಿರಂತರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿದೆ ಎಂದು ತಿಳಿಸಿದರು.

ಹಾಸನಾಂಬ ದರ್ಶನೋತ್ಸವ ಸಭೆಗಳಿಗೆ ಆಹ್ವಾನಿಸಿಲ್ಲ: ಸೂರಜ್ ರೇವಣ್ಣ ಆಕ್ರೋಶ



ಪ್ರಜಾ ಭಾರತ ವರದಿ

ಹಾಸನ: ಹಾಸನಾಂಬ ದೇವಿ ದರ್ಶನೋತ್ಸವದ ಪೂರ್ವಸಿದ್ಧತೆ ಹಾಗೂ ಜಾತ್ರಾ ಮಹೋತ್ಸವಕ್ಕೆ ಸಂಬಂಧಿಸಿದಂತೆ ಜಿಲ್ಲಾಡಳಿತ ನಡೆಸಿದ ಸಭೆಗಳಿಗೆ ತಮ್ಮನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘಿಸಲಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಆರೋಪಿಸಿದರು.

ಶುಕ್ರವಾರ ಹಾಸನಾಂಬ ದೇವಿ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲಾಧಿಕಾರಿ ಕೆ.ಎಸ್. ಲತಾ ಕುಮಾರಿ ಹಾಗೂ ಸಂಬಂಧಪಟ್ಟ ಅಧಿಕಾ-ರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ದರ್ಶನೋತ್ಸವಕ್ಕೆ ಸಂಬಂಧಿಸಿದಂತೆ ಹಲವು ಸಭೆಗಳನ್ನು ನಡೆಸಿದ್ದರೂ, ತಮಗೆ ಯಾವುದೇ ಮಾಹಿತಿ ನೀಡಿಲ್ಲ. ಸಭೆಯ ನೋಟಿಸ್ ನೀಡದೆ, ದೂರವಾಣಿ ಮೂಲಕವೂ ಆಹ್ವಾನಿಸಿಲ್ಲ. ಜಾತ್ರಾ ಮಹೋತ್ಸವದ ಸಿದ್ಧತೆ, ಕಾರ್ಯಕ್ರಮಗಳು ಹಾಗೂ ಖರ್ಚು-ವೆಚ್ಚಗಳ ಬಗ್ಗೆಯೂ ಮಾಹಿತಿ ಹಂಚಿಕೊಂಡಿಲ್ಲ. ವಿಧಾನ ಪರಿಷತ್ ಸದಸ್ಯನಾಗಿ ತಮ್ಮನ್ನು ಕಡೆಗಣಿಸಿರುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.

ಕಳೆದ ಬಾರಿ ಜಿಲ್ಲಾ ಉಸ್ತುವಾರಿ ಸಚಿವರು ಎಲ್ಲ ಶಾಸಕರು ಹಾಗೂ ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಭೆ ನಡೆಸಿದ್ದರು. ಆದರೆ ಈ ಬಾರಿ ಯಾವ ಸಭೆಯಲ್ಲಿ ಏನು ತೀರ್ಮಾನಿಸಲಾಗಿದೆ ಎಂಬುದೇ ತಮಗೆ ತಿಳಿದಿಲ್ಲ. ಈ ಕುರಿತು ಸಂಬಂಧಪಟ್ಟವ-ರಿಗೆ ಪತ್ರ ಬರೆದಿದ್ದು, ವಿಧಾನ ಪರಿಷತ್‌ನಲ್ಲಿ ವಿಷಯ ಪ್ರಸ್ತಾಪಿಸುವುದರ ಜತೆಗೆ ಹಕ್ಕುಚ್ಯುತಿ ಮಂಡಿಸಿ ಕ್ರಮಕ್ಕೆ ಒತ್ತಾಯಿಸುವುದಾಗಿ ಎಚ್ಚರಿಕೆ ನೀಡಿದರು.

ಹಾಲಿನ ದರ ಏರಿಕೆ ಸ್ವಾಗತಾರ್ಹ

ರಾಜ್ಯ ಸರ್ಕಾರದ ಹಾಲಿನ ದರ ಏರಿಕೆ ನಿರ್ಧಾರವನ್ನು ಸ್ವಾಗತಿಸಿದ ಸೂರಜ್ ರೇವಣ್ಣ, ಹಾಲು ಉತ್ಪಾದಕರ ಹಿತಕ್ಕೆ ಮೊದಲ ಆದ್ಯತೆ ನೀಡಬೇಕು ಎಂದರು.

ರಾಜ್ಯದಲ್ಲಿ ಹಾಲು ಉತ್ಪಾದಕರಿಂದ ಪ್ರತಿ ಲೀಟರ್‌ಗೆ ಸುಮಾರು ರೂ.35 ನೀಡಲಾಗುತ್ತಿದ್ದು, ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ ರೂ.41.50 ಹಾಗೂ ತಮಿಳುನಾಡಿನಲ್ಲಿ ರೂ.40.50 ನೀಡಲಾಗುತ್ತಿದೆ. ಬರಗಾಲ, ಮೇವಿನ ಕೊರತೆ ಸೇರಿದಂತೆ ಹಲವು ಸಮಸ್ಯೆಗಳಿಂದ ಹೈನುಗಾರರು ಸಂಕಷ್ಟ ಎದುರಿಸುತ್ತಿದ್ದಾರೆ. ಹಾಲು ಉತ್ಪಾದಕರು ಹಾಗೂ ಹಾಲು ಒಕ್ಕೂಟಗಳ ಹಿತ ಕಾಪಾಡುವುದರ ಜತೆಗೆ ಗ್ರಾಹಕ-ರಿಗೂ ಹೊರೆಯಾಗದಂತೆ ದರ ಏರಿಕೆ ಮಾಡಿರುವುದು ಸ್ವಾಗತಾರ್ಹ. ಈ ನಿರ್ಧಾರವನ್ನು ಬಹಳ ಹಿಂದೆಯೇ ಕೈಗೊಳ್ಳಬೇಕಿತ್ತು ಎಂದು ಅಭಿಪ್ರಾಯಪಟ್ಟರು.

ಸಂಜೆ ದರ್ಶನ ಇಲ್ಲ

ಹಾಸನ: ಹಾಸನಾಂಬೆ ದರ್ಶನಕ್ಕೆ ಭಕ್ತರ ಪ್ರವಾಹವೇ ಹರಿದು ಬರುತ್ತಿರುವುದರಿಂದ ಜನ ಸಾಗರ ನಿಯಂತ್ರಣ ಮಾಡಲು ಸ್ವತಃ ಸಚಿವ ಕೆ.ಎಂ.ಶಿವಲಿಂಗೇಗೌಡ ಇಲ್ಲಿಗಿಳಿದರು. ಗರ್ಭಗುಡಿಎದುರು ನಿಂತು ಭಕ್ತರಿಗೆ ಶಾಂತವಾಗಿ ಬನ್ನಿ ಎಂದು ಸೂಚನೆ ನೀಡಿದರು. ಪೊಲೀಸರ ಜೊತೆ ನಿಂತು ಬೇಗ ಬೇಗ ದರ್ಶನ ಮಾಡಿ ಮುಂದೆ ಕಳಿಸುವ ಪ್ರಯತ್ನ ಮಾಡಿದರು.ಭರ್ತಿಯಾಗಿರುವ ಸರತಿ ಸಾಲು ಮುಗಿಸಲು ಬೇಗ ಬೇಗ ದರ್ಶನ ಮಾಡಿ ಎಂದು ಮನವಿ ಮಾಡಿದರು. ಹಾಸನಾಂಬೆ ಸಾರ್ವಜನಿಕ ದರ್ಶನ ಇಂದು ಸಂಜೆ 7 ಗಂಟೆವರೆಗೆ ಮಾತ್ರ ಇರಲಿದ್ದು, ಮತ್ತೆ ಬೆಳಗ್ಗೆ 6 ಗಂಟೆಯಿಂದ ದರ್ಶನ ಭಾಗ್ಯ ಮುಂದುವರಿಯಲಿದೆ.

ಸಕಲೇಶಪುರದಿಂದ ಉತ್ತರಾಖಂಡದವರೆಗೆ ನೆರವಿನ ಹಸ್ತ ಚಾಚಿದ ಶಾಸಕ ಸಿಮೆಂಟ್ ಮಂಜು

ಪ್ರಜಾ ಭಾರತ ವರದಿ



ಸಕಲೇಶಪುರ: ಉತ್ತರಾಖಂಡದಲ್ಲಿ ಸಂಭವಿಸಿದ ಹೆಲಿಕಾಪ್ಟರ್ ದುರಂತದಲ್ಲಿ ಸಕಲೇಶಪುರದ ಪ್ರತಾಪ್ ಗೌಡ ಮೃತಪಟ್ಟ ಸುದ್ದಿ ತಿಳಿಯುತ್ತಿದ್ದಂತೆ ಶಾಸಕ ಸಿಮೆಂಟ್ ಮಂಜು ಅವರು ತಕ್ಷಣ ಕಾರ್ಯಪ್ರವೃತ್ತರಾಗಿ ಸಂತ್ರಸ್ತ ಕುಟುಂಬಕ್ಕೆ ನೆರವಾಗಲು ಮುಂದಾಗಿದ್ದಾರೆ.

ಉತ್ತರಾಖಂಡ ಮುಖ್ಯಮಂತ್ರಿ ಕಚೇರಿಯ ಜಂಟಿ ಕಾರ್ಯದರ್ಶಿ ಅನಿಲ್ ಜೋಶಿ ಹಾಗೂ ಚಮೋಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುರಜಿತ್ ಸಿಂಗ್ ಬನ್ವಾಲ್ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿದ ಶಾಸಕರು, ಮೃತದೇಹಗಳ ಪತ್ತೆ, ಗುರುತು ಪತ್ತೆ ಹಾಗೂ ಮೃತರ ಕುಟುಂಬಕ್ಕೆ ಅಗತ್ಯ ನೆರವು ಕಲ್ಪಿಸುವಂತೆ ಮನವಿ ಮಾಡಿದ್ದಾರೆ.

ಕ್ಷೇತ್ರದ ಜನರು ಎಲ್ಲೇ ಸಂಕಷ್ಟಕ್ಕೆ ಸಿಲುಕಿದರೂ ಅವರ ನೆರವಿಗೆ ಧಾವಿಸುವ ಶಾಸಕರ ಈ ಮಾನವೀಯ ಕಾಳಜಿಗೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ರೈಲ್ವೆ ಕಾಮಗಾರಿಯಿಂದ ನೀರಿನ ಪೈಪ್‌ಗೆ ಹಾನಿ

ಮೂರು ದಿನಗಳಿಂದ ನೀರು ಸರಬರಾಜು ವ್ಯತ್ಯಯ

ಪ್ರಜಾ ಭಾರತ ವರದಿ

ಬೇಲೂರು: ರೈಲ್ವೆ ಕಾಮಗಾರಿಯಿಂದ ಕುಡಿಯುವ ನೀರಿನ ಪೈಪ್‌ಲೈನ್ ಹಾನಿಗೊಳಗಾಗಿ ಕಳೆದ ಮೂರು ದಿನಗಳಿಂದ ಬೇಲೂರು ಪಟ್ಟಣದಲ್ಲಿ ನೀರು ಸರಬರಾ-ಜಿಗೆ ವ್ಯತ್ಯಯ ಉಂಟಾಗಿದ್ದು, ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಮತ್ತೊಂದೆಡೆ, ಮೂಡಿಗೆರೆ ಸಂಪರ್ಕಿಸುವ ಪ್ರಮುಖ ರಸ್ತೆ ಗುಂಡಿಮಯವಾಗಿದ್ದು, ವಾಹನ ಸವಾರರು ಹಾಗೂ ಶಾಲಾ ಮಕ್ಕಳು ಸಂಕಷ್ಟ ಎದುರಿಸುವಂತಾಗಿದೆ. ಈ ಅವ್ಯವಸ್ಥೆಯನ್ನು ಖಂಡಿಸಿ ಕರ್ನಾಟಕ ಸಿಂಹ ಸೇನೆ ಪದಾಧಿಕಾರಿಗಳು ರೈಲ್ವೆ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳಕ್ಕೆ ಭೇಟಿ ನೀಡಿ ರೈಲ್ವೆ ಅಧಿಕಾರಿಗಳೊಂದಿಗೆ



ಚರ್ಚಿಸಿದ ಕರ್ನಾಟಕ ಸಿಂಹ ಸೇನೆ ತಾಲೂಕು ಅಧ್ಯಕ್ಷ ಚೇತನ್ ಗೌಡ, ರೈಲ್ವೆ ಕಾಮಗಾರಿಯಿಂದ ಸಾರ್ವಜನಿಕ-ರಿಗೆ ಮೂಲಭೂತ ಸೌಕರ್ಯಗಳೇ ಇಲ್ಲದಂತಾಗಿದೆ ಎಂದು ಆರೋಪಿಸಿದರು.

ಮೂಡಿಗೆರೆ ಸಂಪರ್ಕಿಸುವ ಈ ಪ್ರಮುಖ ರಸ್ತೆಯಲ್ಲಿ ಪ್ರತಿದಿನ ಸಾವಿರಾರು ಜನರು ಹಾಗೂ ವಿದ್ಯಾರ್ಥಿಗಳು ಸಂಚರಿಸುತ್ತಾರೆ.

ಆದರೆ ರಸ್ತೆಯುದ್ದಕ್ಕೂ ಗುಂಡಿಗಳು ನಿರ್ಮಾಣವಾಗಿದ್ದು, ವಾಹನ ಸವಾರರು ಮತ್ತು ಶಾಲಾ ಮಕ್ಕಳು ಅಪಾಯದ ನಡುವೆ ಸಂಚರಿಸುವಂತಾಗಿದೆ. ಕಾಮಗಾರಿ ನಡೆಸುವಾಗ ಸಾರ್ವಜನಿಕ-



ರಿಗೆ ತೊಂದರೆಯಾಗದಂತೆ ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕಾದ ರೈಲ್ವೆ ಇಲಾಖೆ ನಿರ್ಲಕ್ಷ್ಯ ತೋರುತ್ತಿದೆ ಎಂದು ಕಿಡಿಕಾರಿದರು.

ರೈಲ್ವೆ ಕಾಮಗಾರಿ ವೇಳೆ ಕುಡಿಯುವ ನೀರಿನ ಪೈಪ್‌ಲೈನ್ ಹಾನಿಗೊಳಗಾಗಿ ಮೂರು ದಿನ ಕಳೆದರೂ ದುರಸ್ತಿಗೆ ಕ್ರಮ ಕೈಗೊಂಡಿಲ್ಲ. ಪುರಸಭೆ ನೌಕರರು ಮನವಿ ಮಾಡಿದರೂ ಅಧಿಕಾರಿಗಳು ಸ್ಪಂದಿಸಿಲ್ಲ. ರಾತ್ರೋರಾತ್ರಿ ಕಾಮಗಾರಿ ನಡೆಸಿ ಪೈಪ್‌ಲೈನ್‌ಗೆ ಹಾನಿ ಮಾಡಿರುವುದು ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೂಡಲೇ ಪೈಪ್‌ಲೈನ್ ದುರಸ್ತಿಗೊಳಿಸಿ ನೀರು ಸರಬರಾಜು ಪುನರಾರಂಭಿಸಬೇಕು. ರಸ್ತೆಯ ಗುಂಡಿಗಳನ್ನು ಮುಚ್ಚಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಬೇಕು. ಇಲ್ಲದಿದ್ದರೆ ಸಂಘಟನೆಯ ವತಿಯಿಂದ ಧರಣಿ ನಡೆಸಿ, ಸಮಸ್ಯೆ ಬಗೆಹರಿಯುವವರೆಗೂ ಹೋರಾಟ ಮುಂದುವರಿಸಲಾಗುವುದು ಎಂದು ಚೇತನ್ ಗೌಡ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಪುರಸಭೆಯ ನೀರು ಸರಬರಾಜು ವಿಭಾಗದ ವ್ಯವಸ್ಥಾಪಕ ಕುಮಾರ್, ಸಿಬ್ಬಂದಿ ಹಾಗೂ ಕರ್ನಾಟಕ ಸಿಂಹ ಸೇನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಉತ್ತರಾಖಂಡ ಹೆಲಿಕಾಪ್ಟರ್ ದುರಂತಕ್ಕೆ ಹಾಸನದ ಉದ್ಯಮಿ ಬಲಿ

ಸಮಾಜಸೇವಕ, ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದ ಬಾಚಿಹಳ್ಳಿಯ ಪ್ರತಾಪ್‌ಗೌಡ ಸೇರಿ ಆರು ಮಂದಿ ದುರ್ಮರಣ

ಪ್ರಜಾ ಭಾರತ ವರದಿ

ಸಕಲೇಶಪುರ, ಅ.30: ಉತ್ತರಾಖಂಡದ ಚಮೋಲಿ ಜಿಲ್ಲೆಯ ಜೋಶಿಮಠ ಸಮೀಪ ಹೆಲಿಕಾಪ್ಟರ್ ಪತನಗೊಂಡು ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಬಾಚಿಹಳ್ಳಿ ಗ್ರಾಮದ ಉದ್ಯಮಿ ಹಾಗೂ ಸಮಾಜಸೇವಕ ಪ್ರತಾಪ್‌ಗೌಡ (44) ಸೇರಿದಂತೆ ಆರು ಮಂದಿ ಮೃತಪಟ್ಟಿರುವ ಘಟನೆ ಜಿಲ್ಲೆಯಲ್ಲಿ ತೀವ್ರ ಆಘಾತ ಮೂಡಿಸಿದೆ.



ಬೆಂಗಳೂರಿನಲ್ಲಿ ಉದ್ಯಮಿಯಾಗಿ ಗುರುತಿಸಿಕೊಂಡಿದ್ದ ಪ್ರತಾಪ್‌ಗೌಡ, ತಮ್ಮ ಹುಟ್ಟೂರಾದ ಸಕಲೇಶಪುರ ತಾಲ್ಲೂಕಿನೊಂದಿಗೆ ನಿಕಟ ಸಂಬಂಧ ಹೊಂದಿದ್ದರು. ಹಲವು ಸಮಾಜಮುಖಿ ಕಾರ್ಯಗಳ ಮೂಲಕ ಸ್ಥಳೀಯರ ಪ್ರೀತಿ, ವಿಶ್ವಾಸ ಗಳಿಸಿದ್ದ ಅವರು, ರಾಜಕೀಯ ಕ್ಷೇತ್ರದಲ್ಲಿಯೂ ಸಕ್ರಿಯರಾಗಿದ್ದರು. ಅವರ ಅಕಾಲಿಕ ನಿಧನದ ಸುದ್ದಿ ತಿಳಿಯುತ್ತಿದ್ದಂತೆ ಕುಟುಂಬಸ್ಥರು, ಸ್ನೇಹಿತರು, ಅಭಿಮಾನಿಗಳು ಹಾಗೂ ರಾಜಕೀಯ ವಲಯದಲ್ಲಿ ಶೋಕದ ಛಾಯೆ ಆವರಿಸಿದೆ.

● ರಾಜಕೀಯ ಕ್ಷೇತ್ರದಲ್ಲೂ ಸಕ್ರಿಯ

ಪ್ರತಾಪ್‌ಗೌಡ ಆರಂಭದಲ್ಲಿ ಜೆಡಿಎಸ್‌ನಲ್ಲಿ ಗುರುತಿಸಿಕೊಂಡಿದ್ದರು. 2023ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದೊಂದಿಗೆ ಸಕ್ರಿಯವಾಗಿ ಗುರುತಿಸಿಕೊಂಡಿದ್ದರು ಎನ್ನಲಾಗಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದರು.

ಮುಂಬರುವ ದಿನಗಳಲ್ಲಿ ಸ್ಥಳೀಯ ರಾಜಕೀಯದಲ್ಲಿ ಮತ್ತಷ್ಟು ಸಕ್ರಿಯರಾಗುವ ಉದ್ದೇಶ ಹೊಂದಿದ್ದ ಅವರು, ಯಸಳೂರು ಜಿಲ್ಲಾ ಪಂಚಾಯಿತಿ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದರು. ಸಮಾಜಸೇವೆ ಹಾಗೂ ರಾಜ-ಕೀಯ ಚಟುವಟಿಕೆಗಳ ಮೂಲಕ ಜನರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದ ಪ್ರತಾಪ್‌ಗೌಡ ಅವರ ನಿಧನ ಸ್ಥಳೀಯರಿಗೆ ತುಂಬಲಾರದ ನಷ್ಟವಾಗಿದೆ.

ಸಮಾಜಸೇವೆಯ ಮೂಲಕ ಜನರ ಮನದಲ್ಲಿ ನೆಲೆಸಿದ್ದ ವ್ಯಕ್ತಿ ಬಾಚಿಹಳ್ಳಿ ಗ್ರಾಮದ ಮೂಲದವರಾಗಿದ್ದ ಪ್ರತಾಪ್‌ಗೌಡ ಬೆಂಗಳೂರಿನಲ್ಲಿ ಉದ್ಯಮ ನಡೆಸುತ್ತಿದ್ದರೂ ಹುಟ್ಟೂರಿನ ಜನರೊಂದಿಗೆ ನಿರಂತರ ಸಂಪರ್ಕ ಹೊಂದಿದ್ದರು. ವಿವಿಧ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡು ಸ್ಥಳೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದರು. ಸಾರ್ವಜನಿಕ ಜೀವನದಲ್ಲಿ ಮತ್ತಷ್ಟು ಸಕ್ರಿಯರಾಗಿ ಜನಸೇವೆಯಲ್ಲಿ ತೊಡಗಿಸಿಕೊಳ್ಳುವ ಆಶಯ ಹೊಂದಿದ್ದ ಅವರ ಕನಸುಗಳು ಅಕಾಲಿಕ ಸಾವಿನಿಂದ ಅಂತ್ಯ ಗೊಂಡಿವೆ ಎಂದು ಸ್ಥಳೀಯರು ಕಂಬನಿ ಮಿಡಿಯುತ್ತಿದ್ದಾರೆ.

● ಉತ್ತರಾಖಂಡದಲ್ಲಿ ಭೀಕರ ದುರಂತ

ಶುಕ್ರವಾರ ಉತ್ತರಾಖಂಡದ ಬದರಿನಾಥ-'ದಿಂದ ಡೆಹ್ರಾಡೂನ್‌ಗೆ ತೆರಳುತ್ತಿದ್ದ ಟ್ರಾನ್ಸ್ ಭಾರತ್ ಏವಿಯೇಷನ್ ಸಂಸ್ಥೆಗೆ ಸೇರಿದ ಹೆಲಿಕಾಪ್ಟರ್, ಚಮೋಲಿ ಜಿಲ್ಲೆಯ ಜೋಶಿಮಠ ಸಮೀಪದ ಚಾಯ್ ಗ್ರಾಮದ ಬಳಿಯ ಬೆಟ್ಟದ ಇಳಿಜಾರಿನಲ್ಲಿ ಪತನಗೊಂಡಿದೆ. ಹೆಲಿಕಾಪ್ಟರ್‌ನಲ್ಲಿದ್ದ ಪೈಲಟ್ ಸೇರಿದಂತೆ ಆರು ಮಂದಿ ಮೃತಪಟ್ಟಿರುವುದಾಗಿ ವರದಿಯಾಗಿದೆ. ಪ್ರತಿಕೂಲ ಹವಾಮಾನದ ನಡುವೆ ಸಂಭವಿಸಿರುವ ದುರಂತಕ್ಕೆ ನಿಖರ ಕಾರಣ ತನಿಖೆಯಿಂದ ತಿಳಿದುಬರಬೇಕಿದೆ.

ಹಾಸನ ಜಿಲ್ಲೆಯ ವ್ಯಕ್ತಿಯೊಬ್ಬರು ಈ ದುರಂತದಲ್ಲಿ ಮೃತಪಟ್ಟಿರುವುದು ಜಿಲ್ಲೆಯ ಜನರಲ್ಲಿ ತೀವ್ರ ದುಃಖ ಮೂಡಿಸಿದೆ.

ಉದ್ಯಮ, ಸಮಾಜಸೇವೆ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದ್ದ ಪ್ರತಾಪ್‌ಗೌಡ ಅವರ ಅಗಲಿಕೆಗೆ ಗಣ್ಯರು, ರಾಜಕೀಯ ಮುಖಂಡರು ಹಾಗೂ ಸ್ಥಳೀಯರು ಸಂತಾಪ ಸೂಚಿಸುತ್ತಿದ್ದಾರೆ.

ರಾಜ್ಯದಲ್ಲಿ ಸಿದ್ದರಾಮಯ್ಯ ಅವರೇ ಮಾಸ್ ಲೀಡರ್: ಎ. ಮಂಜು

ಹಾಸನಾಂಬೆ ದರ್ಶನದ ವ್ಯವಸ್ಥೆಗೆ ಮೆಚ್ಚುಗೆ; ಹಾಲಿನ ದರ ಏರಿಕೆಗೆ ಸ್ವಾಗತ


ಪ್ರಜಾ ಭಾರತ ವರದಿ

ಹಾಸನ: ರಾಜ್ಯದಲ್ಲಿ ಸಿದ್ದರಾಮಯ್ಯ ಅವರೇ ಮಾಸ್ ಲೀಡರ್. ಅವರ ನಾಯಕತ್ವ ಇಲ್ಲದಿದ್ದರೆ ಕಾಂಗ್ರೆಸ್‌ಗೆ 136 ಸ್ಥಾನಗಳ ಬದಲಿಗೆ 36 ಸ್ಥಾನಗಳೂ ಬರುತ್ತಿರಲಿಲ್ಲ ಎಂದು ಮಾಜಿ ಸಚಿವ ಎ. ಮಂಜು ಹೇಳಿದರು.

ಹಾಸನಾಂಬೆ ದೇವಿಯ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲಾಡಳಿತ ಭಕ್ತರಿಗೆ ಉತ್ತಮ ವ್ಯವಸ್ಥೆ ಕಲ್ಪಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, ಜಿಲ್ಲಾಡಳಿತ ಹಾಗೂ ಸಚಿವರನ್ನು ಅಭಿನಂದಿಸಿದರು.

ಹಾಲಿನ ದರವನ್ನು 8 ರೂ. ಹೆಚ್ಚಿಸಿರುವುದನ್ನು ಸ್ವಾಗತಿಸಿದ ಅವರು, ರೈತರಿಗೆ ಅನುಕೂಲವಾಗುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಗ್ಯಾರಂಟಿ ಯೋಜನೆಗಳನ್ನು ಘೋಷಿಸುವ ಮುನ್ನ ಸಂಪನ್ಮೂಲ ಸಂಗ್ರಹದ ಬಗ್ಗೆ ಚಿಂತಿಸಬೇಕಿತ್ತು ಎಂದು ಅಭಿಪ್ರಾಯಪಟ್ಟರು.

ಸಿದ್ದರಾಮಯ್ಯ ಅವರಿಗೆ ಕ್ಲೀನ್‌ಚಿಟ್ ನೀಡಿರುವ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಪ್ರಕರಣದಿಂದ ಉಂಟಾಗಬಹುದಾದ ರಾಜಕೀಯ ಹಾನಿಯನ್ನು



ನಿಯಂತ್ರಿಸುವ ಪ್ರಯತ್ನ ನಡೆದಿದೆ ಎಂದರು. ಗ್ಯಾರಂಟಿ ಯೋಜನೆಗಳಿಂದಲೇ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ ಎಂಬುದನ್ನು ಒಪ್ಪುವುದಿಲ್ಲ ಎಂದು ತಿಳಿಸಿದರು.

ಮೈಸೂರು ರಾಜಮನೆತನದ ಕುರಿತು ಮಾತನಾಡಿ, ಮಹಾರಾಜರು ಉದಾರ ಮನೋಭಾವದಿಂದ ತಮ್ಮ ಆಸ್ತಿಯನ್ನು ಸರ್ಕಾರಕ್ಕೆ ನೀಡಿದ್ದಾರೆ. ಅಂತಹ ರಾಜಮನೆತನಕ್ಕೆ ಅವಮಾನ ಮಾಡಬಾರದು ಎಂದು ಹೇಳಿದರು.

ಪ್ರಜಾ ಭಾರತ
ಶುಭ ನುಡಿ

ಜೀವನದಲ್ಲಿನ ಪ್ರತಿ ನೋವು ಶಾಪವಲ್ಲ, ಪ್ರತಿ ಸುಖವೂ ಶಾಶ್ವತವಲ್ಲ .

‘ಪರನಿಂದನೆಯಲ್ಲಿ ಪರಮಾರ್ಥ ಕಾಣುವ ನಿಂದಕ ಮಂತ್ರಿ; ನಿಮ್ಮಪ್ಪ ಆಲ್ ಇಂಡಿಂ–ಯಾ ಅಧ್ಯಕ್ಷರೆನ್ನುವ ಕಾರಣ–ಕ್ಕೆ ಬೆಂಕಿಕಡ್ಡಿ ಗೀರಿ ಚಳಿ ಕಾಯಿಸಿಕೊಳ್ಳಬೇಡಿ’!

ಬೆಂಗಳೂರು: ಗೃಹ ಮಂತ್ರಿಯಾಗಿ ರಾಜ್ಯದ ಆಡಳಿತಕ್ಕೆ ಗ್ರಹಣ ಹಿಡಿಸಿದ್ದೀರಿ. ಮಿದುಳು, ನಾಲಿಗೆ, ವಿವೇಕ ಮತ್ತು ಕೆಲಸ ಎಲ್ಲವೂ ಹಳಿತಪ್ಪಿ ಹಾದಿ ತಪ್ಪಿದ್ದೀರಿ. ಮೊದಲು ಚಿಕಿತ್ಸೆ ಪಡೆದುಕೊಳ್ಳಿ ನಿಂದಕ ಮಂತ್ರಿ ಪ್ರಿಯಾಂಕ್ ಖರ್ಗೆ ಅವರೇ ಎಂದು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಹೇಳಿದ್ದಾರೆ.ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿರುವ ಅವರು ನನ್ನ ಮಾತಿನ ಅರಿವು ನನಗಿದೆ. ನಿಮ್ಮ ಮಾತಿನ ಹರಿವು ನಿಮಗೆ ಗೊತ್ತಿಲ್ಲ.

ಹಾಸನಾಂಬೆ : ಮೊದಲ ದಿನವೇ ಭಕ್ತರ ಸಂಖ್ಯೆ ಹೆಚ್ಚಳ

ಆನ್‌ಲೈನ್ ಟಿಕೆಟ್, ಲಾಡು ಮಾರಾಟದಿಂದ ರೂ.1.43 ಕೋಟಿ ಆದಾಯ

ಪ್ರಜಾ ಭಾರತ ವರದಿ

ಹಾಸನ: ನಾಡಿನ ಆರಾಧ್ಯ ದೇವತೆ ಶ್ರೀ ಹಾಸನಾಂಬೆ ದೇವಿಯ ದರ್ಶನೋತ್ಸವಕ್ಕೆ ಮೊದಲ ದಿನವೇ ಭಕ್ತಸಾಗರ ಹರಿದುಬಂದಿದ್ದು, ದೇವಸ್ಥಾನದ ಸುತ್ತಮುತ್ತ ಭಕ್ತರ ದಟ್ಟಣೆ ಕಂಡುಬಂದಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಭಕ್ತರ ಸಂಖ್ಯೆಯಲ್ಲಿ ಎರಡರಿಂದ ಮೂರು ಪಟ್ಟು ಹೆಚ್ಚಳವಾಗಿದ್ದು, ಆನ್‌ಲೈನ್ ಟಿಕೆಟ್ ಹಾಗೂ ಲಾಡು ಮಾರಾಟದಿಂದ ಈಗಾಗಲೇ ದೇವಸ್ಥಾನಕ್ಕೆ ರೂ.1.43 ಕೋಟಿ ಆದಾಯ ಲಭಿಸಿದೆ ಎಂದು ಉಪವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್ ತಿಳಿಸಿದ್ದಾರೆ.



ದೇವಾಲಯದ ಆವರಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಂಪ್ರದಾಯದಂತೆ ಬುಧವಾರ ಮಧ್ಯಾಹ್ನ 12 ಗಂಟೆಗೆ ದೇವಾಲಯದ ಬಾಗಿಲು ತೆರೆಯಲಾಗಿದ್ದು, ಮೊದಲ ಹಂತದಲ್ಲಿ 5 ಸಾವಿರಕ್ಕೂ ಹೆಚ್ಚು ಭಕ್ತರು ದೇವಿಯ ದರ್ಶನ ಪಡೆದಿದ್ದಾರೆ. ಬಳಿಕ ಧಾರ್ಮಿಕ ವಿಧಿವಿಧಾನಗಳಿಗಾಗಿ ಮಧ್ಯಾಹ್ನ 3 ಗಂಟೆಗೆ ಬಾಗಿಲು ಮುಚ್ಚಿ, ಗುರುವಾರ ಬೆಳಗಿನ ಜಾವ 4.45ಕ್ಕೆ ಸಾರ್ವಜನಿಕ ದರ್ಶನಕ್ಕೆ ಮತ್ತೆ ಅವಕಾಶ ಕಲ್ಪಿಸಲಾಯಿತು ಎಂದರು.

● ರಾತ್ರಿಯಿಂದಲೇ ಸರದಿ ಸಾಲಿನಲ್ಲಿ ಭಕ್ತರು!

ಹಾಸನಾಂಬೆ ದರ್ಶನಕ್ಕಾಗಿ ಬುಧವಾರ ರಾತ್ರಿಯಿಂದಲೇ ಸಾವಿರಾರು ಭಕ್ತರು ಸರದಿ ಸಾಲಿನಲ್ಲಿ ಕಾಯುತ್ತಿದ್ದರು. ಗುರುವಾರ ಬೆಳಗಿನ ಜಾವ 5 ಗಂಟೆಯ ವೇಳೆಗೆ ಸಾಮಾನ್ಯ ಸರದಿ ಸಾಲು ಪ್ರವೇಶ ದ್ವಾರವನ್ನೂ ದಾಟಿ ವಿಸ್ತರಿಸಿತ್ತು. ಭಕ್ತರ ದಟ್ಟಣೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಂತೆಪೇಟೆ ವೃತ್ತದಿಂದ ದೇವಸ್ಥಾನ ದವರೆಗೆ ಈಗಾಗಲೇ ನಿರ್ಮಿಸಿರುವ ಸುಮಾರು 350 ಮೀಟರ್ ಬ್ಯಾರಿಕೇಡ್ ವ್ಯವಸ್ಥೆಯನ್ನು ಮತ್ತಷ್ಟು ವಿಸ್ತರಿಸಲು ಜಿಲ್ಲಾಡಳಿತ ಮುಂದಾಗಿದೆ.

ಭಕ್ತರು ಗಂಟೆಗಟ್ಟಲೆ ಸರದಿ ಸಾಲಿನಲ್ಲಿ ಕಾಯುವುದನ್ನು ತಪ್ಪಿಸಿ, ಸುಗಮವಾಗಿ ದರ್ಶನ ಪಡೆಯಲು ಅಗತ್ಯ ವ್ಯವಸ್ಥೆಗಳನ್ನು ಕೈಗೊಳ್ಳಲಾಗುತ್ತಿದೆ. ಭಕ್ತರ ಸಂಖ್ಯೆಗೆ ಅನುಗುಣವಾಗಿ ಸರದಿ ಸಾಲಿನ ನಿರ್ವಹಣೆ ಹಾಗೂ ಮೂಲಸೌಕರ್ಯಗಳ ವ್ಯವಸ್ಥೆಗೆ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದರು.

● ಆನ್‌ಲೈನ್ ಟಿಕೆಟ್ ಮಾರಾಟಕ್ಕೆ ಭರ್ಜರಿ ಸ್ಪಂದನೆ

ಅ. 22ರಿಂದ ಆರಂಭಿಸಿರುವ ಆನ್‌ಲೈನ್ ಟಿಕೆಟ್ ವ್ಯವಸ್ಥೆಗೆ ಭಕ್ತ–ರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ವೆಬ್‌ಸೈಟ್, ಮೊಬೈಲ್ ಆಪ್ ಹಾಗೂ ವಾಟ್ಸ್‌ಆಪ್ ಚಾಟ್‌ಬಾಟ್ ಮೂಲಕ ಟಿಕೆಟ್ ಕಾಯ್ದಿರಿಸಲು ಅವಕಾಶ ಕಲ್ಪಿಸಲಾಗಿದ್ದು, ವಾಟ್ಸ್‌ಆಪ್ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಟಿಕೆಟ್ ಬುಕ್ಕಿಂಗ್ ಆಗುತ್ತಿದೆ. ಭಕ್ತರು ತಮಗೆ ಅನುಕೂಲವಾದ ದಿನಾಂಕವನ್ನು ಆಯ್ಕೆ ಮಾಡಿಕೊಂಡು ದರ್ಶನಕ್ಕೆ ಬರಬಹುದಾಗಿದೆ. ಒಬ್ಬರು ಗರಿಷ್ಠ 50 ಟಿಕೆಟ್‌ಗಳನ್ನು ಒಂದೇ ಬಾರಿಗೆ ಕಾಯ್ದಿರಿಸುವ ವ್ಯವಸ್ಥೆಯೂ ಇದೆ.

ಅ. 22ರಿಂದ ಈವರೆಗೆ ರೂ.1,000 ಮುಖಬೆಲೆಯ 10,443 ಟಿಕೆಟ್‌ಗಳ ಮಾರಾಟದಿಂದ ರೂ.1.06 ಕೋಟಿ ಹಾಗೂ ರೂ.300 ಮುಖಬೆಲೆಯ 12,400 ಟಿಕೆಟ್‌ಗಳ ಮಾರಾಟದಿಂದ ರೂ.36 ಲಕ್ಷ ಆದಾಯ ಬಂದಿದೆ. ಇದರೊಂದಿಗೆ ಸುಮಾರು 3,500 ಲಾಡುಗಳ ಆನ್‌ಲೈನ್ ಬುಕ್ಕಿಂಗ್‌ನಿಂದ ರೂ.1.88 ಲಕ್ಷ ಆದಾಯ ಲಭಿಸಿದೆ. ಟಿಕೆಟ್ ಮತ್ತು ಲಾಡು ಮಾರಾಟದಿಂದ ಒಟ್ಟಾರೆ ರೂ.1.43 ಕೋಟಿ ಆದಾಯ ಸಂಗ್ರಹವಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಸುಮಾರು ರೂ. 40ರಿಂದ ರೂ.50 ಲಕ್ಷ ಆದಾಯ ಬಂದಿತ್ತು. ಆದ ರೆ ಈ ಬಾರಿ ಆದಾಯದಲ್ಲಿ ಗಣನೀಯ ಏರಿಕೆಯಾಗಿದ್ದು, ಭಕ್ತರ ಸಂಖ್ಯೆಯಲ್ಲಿಯೂ ಭಾರೀ ಹೆಚ್ಚಳವಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

● ದರ್ಶನದ ಅವಧಿ ವಿಸ್ತರಣೆಗೆ ಚಿಂತನೆ

ಮೊದಲ ದಿನ ದೇವಿಗೆ ವಿಶೇಷ ಅಲಂಕಾರ ಹಾಗೂ ನೈವೇದ್ಯದ ಹಿನ್ನೆಲೆಯಲ್ಲಿ ಬೆಳಿಗ್ಗೆ 7ರಿಂದ ಸಂಜೆ 6ರವರೆಗೆ ದರ್ಶನಕ್ಕೆ ಅವಕಾಶ ಕಲ್ಪಿಸುವ ವೇಳಾಪಟ್ಟಿ ನಿಗದಿಪಡಿಸಲಾಗಿತ್ತು. ಆದರೆ ಭಕ್ತರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ದರ್ಶನದ ಅವಧಿಯನ್ನು ಮತ್ತಷ್ಟು ವಿಸ್ತರಿಸುವ ಕುರಿತು ಸಚಿವರು, ಜಿಲ್ಲಾಧಿಕಾರಿಗಳು ಹಾಗೂ ದೇವಸ್ಥಾನದ ಆಡಳಿತ ಮಂಡಳಿ ಪ್ರಧಾನ ಅರ್ಚಕರೊಂದಿಗೆ ಚರ್ಚೆ ನಡೆಸುತ್ತಿದ್ದಾರೆ.

ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿರುವ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ, ದೀರ್ಘಕಾಲ ಸರದಿ ಸಾಲಿನಲ್ಲಿ ಕಾಯುವ ಪರಿಸ್ಥಿತಿ ತಪ್ಪಿಸಿ ಎಲ್ಲರಿಗೂ ಸುಗಮ ದರ್ಶನ ಕಲ್ಪಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಉಪವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್ ಈ ಸಂದರ್ಭದಲ್ಲಿ ತಿಳಿಸಿದರು.



ಪ್ರಜಾ ಭಾರತ ವರದಿ

ಚನ್ನರಾಯಪಟ್ಟಣ: ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿ–ಎಸ್ ಪಕ್ಷವನ್ನು ತೊರೆದು, ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷರಾದ ಜಾವೀದ್ ಪಾಷಾ ಅವರು ಹಾಗೂ ಮುಖಂಡರಾದ ಖಲೀಲ್ ಅಹ್ಮದ್, ಅಬ್ದುಲ್ ಕುಯೂಮ್, ಖಾಲಿದ್ ಪಾಷಾ, ಜಾಫರ್, ಎಂ.ಡಿ. ಇಸ್ಮಾಯಿಲ್, ಸಾದಿರ್, ಅಬ್ದುಲ್ ಮುನಾಫ್, ಅಬ್ದುಲ್ ಅಜೀಜ್, ವಾಸು, ವೆಂಕಟೇಶ್, ಅಮ್ಜದ್, ಸುಹೇಲ್ ಹಾಗೂ ನವೀದ್ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದ ಎಲ್ಲಾ ಮುಖಂಡರನ್ನು ಮಾಜಿ ವಿಧಾನ ಪರಿಷತ್ ಸದಸ್ಯ ಎಂ. ಎ. ಗೋಪಾಲಸ್ವಾಮಿ ಪಕ್ಷದ ಬಾವುಟ ನೀಡಿ ಸ್ವಾಗತಿಸಿದರು. ಅಹಿಂದಾ ಸಂಘಟನೆ ಮುಖಂಡ ಜಬೀಉಲ್ಲಾ ಬೇಗ್ ಇದ್ದರು.

ಪ್ರಜಾ ಭಾರತ ವರದಿ

ಹಾಸನ: ಐತಿಹಾಸಿಕ ಹಾಸನಾಂಬೆ ದೇವಿ ಜಾತ್ರಾ ಮಹೋತ್ಸವದ ಸಾರ್ವಜನಿಕ ದರ್ಶನದ ಮೊದಲ ದಿನವೇ ಚಿತ್ರರಂಗದ ತಾರಾ ದಂಪತಿಗಳಾದ ನಟ ವಸಿಷ್ಠ ಸಿಂಹ ಹಾಗೂ ನಟಿ ಹರಿಪ್ರಿಯಾ ಹಾಸನಾಂಬೆ ದೇವಿಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.



ಶಿಷ್ಟಾಚಾರ’ದ’ ವಾಹನದಲ್ಲಿ ದೇವಾಲಯಕ್ಕೆ ಆಗಮಿಸಿದ ದಂಪತಿ ಯನ್ನು ದೇವಸ್ಥಾನದ ಸಿಬ್ಬಂದಿ ಬರಮಾಡಿಕೊಂಡರು. ಬಳಿಕ ಗರ್ಭಗುಡಿಯಲ್ಲಿ ದೇವಿಗೆ ಭಕ್ತಿಯಿಂದ ನಮಿಸಿ ಪೂಜೆ ಸಲ್ಲಿಸಿದ ಅವರು, ಶ್ರೀ ಸಿದ್ದೇಶ್ವರ ಸ್ವಾಮಿಯ ದರ್ಶನವನ್ನೂ ಪಡೆದರು.

ದರ್ಶನದ ವೇಳೆ ದೇವಿಯ ಸನ್ನಿಧಿಯಲ್ಲಿ ಕೆಲಕಾಲ ಕಳೆದ ದಂಪತಿ, ದೇವಾಲಯದ ಆವರಣದಲ್ಲಿನ ಧಾರ್ಮಿಕ ವಾತಾವರಣವನ್ನು ವೀಕ್ಷಿಸಿ ದರು.

ಸಾರ್ವಜನಿಕ ದರ್ಶನದ ಮೊದಲ ದಿನವೇ ತಾರಾ ದಂಪತಿ ಹಾಸನಾಂಬೆಯ ದರ್ಶನ ಪಡೆದಿರುವುದು ಭಕ್ತರು ಹಾಗೂ ಅಭಿಮಾನಿಗಳ ಗಮನ ಸೆಳೆಯಿತು.

ರಾಜ್ಯೋತ್ಸವ ಪ್ರಶಸ್ತಿಗೆ ಅರಸೀಕೆರೆಯ ನಾದಸ್ವರ ವಿದ್ವಾನ್ ಡಾ. ನಾರಾಯಣಸ್ವಾಮಿ ಆಯ್ಕೆ

ಪ್ರಜಾ ಭಾರತ ವರದಿ



ಹಾಸನ: ಕನ್ನಡ ರಾಜ್ಯೋತ್ಸವದ ಅಂಗವಾಗಿ ರಾಜ್ಯ ಸರ್ಕಾರ ನೀಡುವ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿಗೆ ಸಂಗೀತ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಅರಸೀಕೆರೆಯ ಅಂತಾರಾಷ್ಟ್ರೀಯ ಖ್ಯಾತಿಯ ನಾದಸ್ವರ ವಿದ್ವಾನ್ ಡಾ. ನಾರಾಯಣಸ್ವಾಮಿ ಅವರು ಆಯ್ಕೆಯಾಗಿದ್ದಾರೆ.

ಅರಸೀಕೆರೆಯ ಬಿ.ಎಚ್. ರಸ್ತೆಯ ನಿವಾಸಿಯಾಗಿರುವ ಇವರು ನಾದಸ್ವರ ವಿದ್ವಾನ್ ಪೆದ್ದಣ್ಣ ಮತ್ತು ಚನ್ನಮ್ಮ ದಂಪತಿಯ ಪುತ್ರ. 1959ರ ಜೂನ್ 1ರಂದು ಜನಿಸಿದ ನಾರಾಯಣಸ್ವಾಮಿ ಅವರು ಬಾಲ್ಯದಿಂದಲೇ ತಂದೆಯ ನಾದಸ್ವರ ಕಲೆಯ ಪ್ರಭಾವಕ್ಕೆ ಒಳಗಾಗಿ ಸಂಗೀತದತ್ತ ಆಸಕ್ತಿ ಬೆಳೆಸಿಕೊಂಡರು. ಬಳಿಕ ವಿದ್ವಾನ್ ಸುಬ್ಬಣ್ಣ ಹಾಗೂ ವಿದ್ವಾನ್ ಬಿ.ಆರ್. ಸುಬ್ಬುಕೃಷ್ಣ ಅವರ ಮಾರ್ಗದರ್ಶನದಲ್ಲಿ ನಾದಸ್ವರದ ಸ್ವರಸ್ಥಾನಗಳ ಅಭ್ಯಾಸ ನಡೆಸಿ, ನಿರಂತರ ಸಾಧನೆಯ ಮೂಲಕ ಕಲಾ ಕ್ಷೇತ್ರದಲ್ಲಿ ವಿಶಿಷ್ಟ ಗುರುತನ್ನು ಮೂಡಿಸಿಕೊಂಡರು.

ಕಳೆದ 48 ವರ್ಷಗಳಿಂದ ನಾದಸ್ವರ ಕಲಾ ಸೇವೆಯಲ್ಲಿ ತೊಡಗಿಸಿಕೊಂಡಿರುವ ಅವರು, ಸವಿತಾ ಕಲಾ ಸಂಘದ ಅಧ್ಯಕ್ಷರಾಗಿ ಹಾಗೂ ತಾಲ್ಲೂಕು ಸವಿತಾ ಸಮಾಜದ ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಕಲಾ ಸಾಧನೆಯನ್ನು ಗುರುತಿಸಿ ಅಮೆರಿಕದ ನ್ಯಾಷನಲ್ ವರ್ಚುವಲ್ ಯೂನಿವರ್ಸಿಟಿ ಫಾರ್ ಪೀಸ್ ಅಂಡ್ ಎಜುಕೇಶನ್ ಸಂಸ್ಥೆಯು 2019ರಲ್ಲಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

2017ರಲ್ಲಿ ಅಮೆರಿಕದ ಡಲ್ಲಾಸ್, ಟೆಕ್ಸಾಸ್‌ನಲ್ಲಿ ನಡೆದ ಉತ್ತರ ಅಮೆರಿಕ ವಿಶ್ವ ಕನ್ನಡ ಆಗರದ ಕಾರ್ಯಕ್ರಮದಲ್ಲಿ ನಾದಸ್ವರ ಕಲಾ ಪ್ರದರ್ಶನ ನೀಡಿ ಕನ್ನಡ ಕಲೆಯ ಹಿರಿಮೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಪರಿಚಯಿಸಿದ್ದಾರೆ. ಮಹಾತ್ಮ ಗಾಂಧಿ ಜೀವಮಾನ ಸಾಧನೆ ಪುರಸ್ಕಾರವೂ ಸೇರಿದಂತೆ ಹಲವು ಗೌರವಗಳು ಇವರ ಸಾಧನೆಯ ಕಿರೀಟಕ್ಕೆ ಸೇರ್ಪಡೆಯಾಗಿವೆ.

ರಾಜ್ಯಮಟ್ಟದ ಸಂಗೀತ ರತ್ನ, ಕರ್ನಾಟಕ ಕಲಾರತ್ನ, ಅರಸೀಕೆರೆ ನಾದಬ್ರಹ್ಮ, ನಾದಸ್ವರ ಬ್ರಹ್ಮ ಹಾಗೂ ತ್ಯಾಗರಾಜಶ್ರೀ ಪ್ರಶಸ್ತಿಗಳು ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳಿಂದ ನೂರಾರು ಸನ್ಮಾನ ಮತ್ತು ಪ್ರಶಸ್ತಿಗಳನ್ನು ಪಡೆದಿದ್ದಾರೆ.

ನಾದಸ್ವರ ಕಲೆಯ ಬೆಳವಣಿಗೆಗೆ ಸುದೀರ್ಘ ಕಾಲದಿಂದ ಕೊಡುಗೆ ನೀಡುತ್ತಾ ಬಂದಿರುವ ಡಾ. ನಾರಾಯಣಸ್ವಾಮಿ ಅವರು ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾಗಿರುವುದು ಅರಸೀಕೆರೆ ಹಾಗೂ ಹಾಸನ ಜಿಲ್ಲೆಯ ಕಲಾಭಿಮಾನಿಗಳಲ್ಲಿ ಸಂತಸ ಮೂಡಿಸಿದೆ.

ಹಾಸನಾಂಬ ಜಾತ್ರೆಯಲ್ಲಿ ಕರ್ತವ್ಯ ಲೋಪ: SDA ಅಮಾನತು

ಗುರುತಿನ ಚೀಟಿಯನ್ನು ಬೇರೆಯವರಿಗೆ ನೀಡಿ ಅನಧಿಕೃತ ದರ್ಶನಕ್ಕೆ ಅವಕಾಶ ಆರೋಪ

ಪ್ರಜಾ ಭಾರತ ವರದಿ

ಹಾಸನ: ಐತಿಹಾಸಿಕ ಹಾಸನಾಂಬ ದೇವಿ ಜಾತ್ರಾ ಮಹೋತ್ಸವದ ವೇಳೆ ಕರ್ತವ್ಯ ಲೋಪ ಎಸಗಿದ ಆರೋಪದ ಹಿನ್ನೆಲೆಯಲ್ಲಿ ತಾಲೂಕು ಕಚೇರಿಯ ದ್ವಿತೀಯ ದರ್ಜೆ ಸಹಾಯಕ (ಖಅಂ) ಉದಯ್ ನಾಗರಾಜ್ ಅವರನ್ನು ಜಿಲ್ಲಾಡಳಿತ ಅಮಾನತುಗೊಳಿಸಿದೆ.



ತಮ್ಮ ಗುರುತಿನ ಚೀಟಿಯನ್ನು ಬೇರೆಯವರಿಗೆ ನೀಡಿ, ಅನಧಿಕೃತವಾಗಿ ದೇವಸ್ಥಾನ ಪ್ರವೇಶಿಸಿ ದರ್ಶನ ಪಡೆಯಲು ಅವಕಾಶ ಮಾಡಿಕೊಟ್ಟ ಆರೋಪ ಇವರ ವಿರುದ್ಧ ಕೇಳಿಬಂದಿದೆ. ಈ ಸಂಬಂಧ ತಹಶೀಲ್ದಾರ್ ಸಲ್ಲಿಸಿದ ವರದಿಯನ್ನು ಪರಿಶೀಲಿಸಿದ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು, ಉದಯ್ ನಾಗರಾಜ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಭದ್ರತಾ ವ್ಯವಸ್ಥೆ ಪರಿಶೀಲಿಸಿದ ಎಸ್ಪಿ

ಇನ್ನೊಂದೆಡೆ, ಹಾಸನಾಂಬ ದೇವಿಯ ದರ್ಶನಕ್ಕೆ ಭಕ್ತರ ದಂಡೇ ಹರಿದುಬರುತ್ತಿರುವ ಹಿನ್ನೆಲೆಯಲ್ಲಿ ದೇವಸ್ಥಾನದ ಆವರಣದಲ್ಲಿ ಪೊಲೀಸ್ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರು ದೇವಸ್ಥಾನದ ಆವರಣದಲ್ಲಿ ಮೊಕ್ಕಾಂ ಹೂಡಿ ಭದ್ರತಾ ವ್ಯವಸ್ಥೆಯನ್ನು ಪರಿಶೀಲಿಸಿದರು.

ಧರ್ಮದರ್ಶನದ ಸರತಿ ಸಾಲುಗಳ ಜತೆಗೆ ರೂ.300 ಹಾಗೂ ರೂ.1,000 ವಿಶೇಷ ದರ್ಶನದ ಸಾಲುಗಳಿಗೂ ಭೇಟಿ ನೀಡಿ ವ್ಯವಸ್ಥೆ ಅವಲೋಕಿಸಿದರು. ಭಕ್ತ–ರಿಗೆ ಯಾವುದೇ ತೊಂದರೆಯಾಗದಂತೆ ಹಾಗೂ ನೂಕುನುಗ್ಗಲು ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದ್ದು, ದೇವಸ್ಥಾನದ ಪ್ರವೇಶ ದ್ವಾರಗಳು ಮತ್ತು ಜನದಟ್ಟಣೆ ಹೆಚ್ಚಿರುವ ಪ್ರದೇಶಗಳಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ದರ್ಶನ ವ್ಯವಸ್ಥೆಯಲ್ಲಿ ಶಿಸ್ತು ಕಾಪಾಡಲು ಹಾಗೂ ನಿಯಮ ಉಲ್ಲಂಘನೆ ಮತ್ತು ಕರ್ತವ್ಯ ಲೋಪದ ಆರೋಪಗಳ ವಿರುದ್ಧ ಕ್ರಮ ಕೈಗೊಳ್ಳಲು ಜಿಲ್ಲಾಡಳಿತ ಮುಂದಾಗಿದೆ.

ವಿದ್ಯುತ್ ಅವಘಡಕ್ಕೆ ಬಲಿಯಾದ ಕೃಷಿ ಕಾರ್ಮಿಕನ ಕುಟುಂಬಕ್ಕೆ ರೂ.2 ಲಕ್ಷ ಪರಿಹಾರಕ್ಕೆ ಶಿಫಾರಸು

ಸಂತ್ರಸ್ತರ ಮನೆ ಬಾಗಿಲಲ್ಲೇ ಸಭೆ ನಡೆಸಿದ ಅಧಿಕಾರಿಗಳು

ಪ್ರಜಾ ಭಾರತ ವರದಿ

ಸಕಲೇಶಪುರ: ಕೃಷಿ ಕೆಲಸದ ವೇಳೆ ವಿದ್ಯುತ್ ಅವಘಡಕ್ಕೆ ಬಲಿಯಾಗಿ ಮೃತಪಟ್ಟ ರಾಜೇಂದ್ರಪುರ ಗ್ರಾಮದ ದುಶ್ಯಂತ್ (40) ಅವರ ಕುಟುಂಬಕ್ಕೆ ರೂ.2 ಲಕ್ಷ ಪರಿಹಾರ ನೀಡುವಂತೆ ಶಿಫಾರಸು ಮಾಡಲು ಸಕಲೇಶಪುರ ಉಪವಿಭಾಗ ಮಟ್ಟದ ಪರಿಶೀಲನಾ ಸಮಿತಿ ನಿರ್ಧರಿಸಿದೆ.



ಉಪವಿಭಾಗಾಧಿಕಾರಿ ಹುಲಿಮನಿ ತಿಮ್ಮಣ್ಣ ಅವರ ಅಧ್ಯಕ್ಷತೆಯಲ್ಲಿ ಅಕ್ಟೋಬರ್ 27ರಂದು ನಡೆದ ರೈತರ ಆಕಸ್ಮಿಕ ಮರಣ, ಆತ್ಮಹತ್ಯೆ ಹಾಗೂ ಬೆಂಕಿ ಅವಘಡ ಪ್ರಕರಣಗಳ ಪರಿಶೀಲನಾ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು. ಸಂತ್ರಸ್ತ ಕುಟುಂಬವು ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸುವ ಉದ್ದೇಶದಿಂದ ಅಧಿಕಾರಿಗಳು ಮನೆ ಬಾಗಿಲಲ್ಲೇ ಸಭೆ ನಡೆಸಿ ಪ್ರಕರಣ ಪರಿಶೀಲಿಸಿದ್ದು ವಿಶೇಷವಾಗಿದೆ.

ದುಶ್ಯಂತ್ ಅವರು ಮೇ 6, 2026ರಂದು ಹೊಸಗದ್ದೆ ಗ್ರಾಮದ ಮೋಹನ್‌ಗೌಡ ಅವರ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಸಿಲ್ವರ್ ಮರ ಕಡಿಯಲು ಬಳಸಿದ ಅಲ್ಯೂಮಿನಿಯಂ ಏಣಿಗೆ ವಿದ್ಯುತ್ ತಂತಿ ತಗುಲಿ ಅಸ್ವಸ್ಥಗೊಂಡಿದ್ದರು. ತಕ್ಷಣ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದರು.

ಮೃತರ ಪತ್ನಿ ಉಷಾ ಹೆಚ್.ಎಸ್. ಸಲ್ಲಿಸಿದ್ದ ಅರ್ಜಿಯೊಂದಿಗೆ ಪೊಲೀಸ್ ದಾಖಲೆಗಳು, ಮರಣೋತ್ತರ ಪರೀಕ್ಷಾ ವರದಿ, ಮರಣ ಪ್ರಮಾಣಪತ್ರ ಹಾಗೂ ಕಂದಾಯ ಮತ್ತು ಕೃಷಿ ಇಲಾಖೆಗಳ ವರದಿಗಳನ್ನು ಸಮಿತಿ ಪರಿಶೀಲಿಸಿತು. ಪ್ರಕರಣವು ಪರಿಹಾರಕ್ಕೆ ಅರ್ಹವೆಂದು ಪರಿಗಣಿಸಿದ ಸಮಿತಿ, ರೂ.2 ಲಕ್ಷ ಪರಿಹಾರ ಪಾವತಿಗೆ ಶಿಫಾರಸು ಮಾಡಿ ಕಡತವನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲು ನಿರ್ಧರಿಸಿತು.

ಸಭೆಯಲ್ಲಿ ಸಹಾಯಕ ಕೃಷಿ ನಿರ್ದೇಶಕ ಪ್ರಕಾಶ್ ಕುಮಾರ್ ಯು. ಎಂ., ವೈದ್ಯಾಧಿಕಾರಿಗಳಾದ ಡಾ. ರಮೇಶ್ ಮತ್ತು ಡಾ. ನಂದಕುಮಾರ್, ಪೊಲೀಸ್ ಉಪನಿರೀಕ್ಷಕರಾದ ಶರತ್ ಮತ್ತು ಪ್ರಸನ್ನ, ಕೃಷಿ ಅಧಿಕಾರಿ ಕೇಶವಮೂರ್ತಿ, ತಾಂತ್ರಿಕ ವ್ಯವಸ್ಥಾಪಕ ಶ್ರವಣ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಮೃತರ ಕುಟುಂಬದವರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಲೋಕಕಲ್ಯಾಣದ ಸಂಕಲ್ಪ ಹೊತ್ತು 136 ಕಿ.ಮೀ. ಪಾದಯಾತ್ರೆ

ಹಾರನಹಳ್ಳಿ, ಅರಕೆರೆ ಶ್ರೀಗಳ ಸಾಥ್; ಬುಕ್ಕಾಂಬುದಿ ತಪೋಕ್ಷೇತ್ರದತ್ತ ನೂರಾರು ಭಕ್ತರ ಹೆಜ್ಜೆ

ಪ್ರಜಾ ಭಾರತ ವರದಿ

ಬೇಲೂರು: ಲೋಕಕಲ್ಯಾಣ, ಧರ್ಮಜಾಗೃತಿ ಹಾಗೂ ಸಮಾಜದಲ್ಲಿ ಸಾಮರಸ್ಯ ಮತ್ತು ಸೌಹಾರ್ದತೆ ಬೆಳೆಸುವ ಸಂಕಲ್ಪದೊಂದಿಗೆ ಅಲೂರು ತಾಲ್ಲೂಕಿನ ಕಾರ್ಜುವಳ್ಳಿ ಶ್ರೀ ಸಂಸ್ಥಾನ ಹಿರೇಮಠದ ಶ್ರೀ ಪ.ಬ್ರ. ಸದಾಶಿವ ಶಿವಾಚಾರ್ಯ ಸ್ವಾಮೀಜಿಗಳ ನೇತೃತ್ವದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ ತಾಲ್ಲೂಕಿನ ಐತಿಹಾಸಿಕ ಬುಕ್ಕಾಂಬುದಿ ತಪೋಕ್ಷೇತ್ರದತ್ತ 136 ಕಿ.ಮೀ. ಪಾದಯಾತ್ರೆ ಕೈಗೊಳ್ಳಲಾಗಿದೆ.

ಕಾರ್ಜುವಳ್ಳಿ ಮಠದಿಂದ ಆರಂಭವಾದ ಪಾದಯಾತ್ರೆ ಮದಘಟ್ಟ, ತಗರೆ ಹಾಗೂ ಬೇಲೂರು ಮಾರ್ಗವಾಗಿ ಹೆಬ್ಬಾಳು ಗ್ರಾಮ ತಲುಪಿದ್ದು, ಗ್ರಾಮಸ್ಥರು ಶ್ರೀಗಳನ್ನು ಭಕ್ತಿಪೂರ್ವಕವಾಗಿ ಸ್ವಾಗತಿಸಿದರು. ಶ್ರೀಗಳೊಂದಿಗೆ ಹಾರನಹಳ್ಳಿ ಮಠದ ಶ್ರೀ ಷ.ಬ್ರ. ಶಿವಯೋಗೀಶ್ವರ ಶಿವಾಚಾರ್ಯ ಸ್ವಾಮೀಜಿಗಳು ಹಾಗೂ ಅರಕೆರೆ ವಿರಕ್ತ ಮಠದ ಶ್ರೀ ಚನ್ನವೀರ ಸ್ವಾಮೀ–ಜಿಗಳು ಹೆಜ್ಜೆ ಹಾಕಿದರು. ನೂರಾರು ಭಕ್ತರು, ವಿಶೇಷವಾಗಿ ಮಹಿಳೆಯರು ಉತ್ಸಾಹದಿಂದ ಪಾದಯಾತ್ರೆಯಲ್ಲಿ ಪಾಲ್ಗೊಂಡರು.



● ಧರ್ಮಜಾಗೃತಿಯೇ ಪಾದಯಾತ್ರೆಯ ಉದ್ದೇಶ

ಬುಕ್ಕಾಂಬುದಿ ತಪೋಕ್ಷೇತ್ರವು ಉಜ್ಜಯಿನಿ ಪೀಠದ ಹಿಂದಿನ ಜಗದ್ಗುರುಗಳು ಅವಿರತ ತಪಸ್ಸು ಆಚರಿಸಿ ಸಿದ್ಧಿ ಪಡೆದ ಪವಿತ್ರ ಕ್ಷೇತ್ರವಾಗಿದೆ. ಈ ಕ್ಷೇತ್ರದ ಐತಿಹಾಸಿಕ ಹಾಗೂ ಧಾರ್ಮಿಕ ಮಹತ್ವವನ್ನು ಜನ–ರಿಗೆ ಪರಿಚಯಿಸುವುದರ ಜತೆಗೆ ಲೋಕಕಲ್ಯಾಣದ ಆಶಯದೊಂದಿಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಕಾರ್ಜುವಳ್ಳಿ ಶ್ರೀಗಳು ತಿಳಿಸಿದರು.ಸಮಾಜದಲ್ಲಿ ಜಾತಿ–ಮತಗಳ ಭೇದವಿಲ್ಲದೆ ಸಾಮರಸ್ಯ, ಸಹಬಾಳ್ವೆ ಹಾಗೂ ಸೌಹಾರ್ದತೆ ನೆಲೆಸಬೇಕು. ರೈತಾಪಿ ವರ್ಗಕ್ಕೆ ಸಮೃದ್ಧ ಮಳೆ–ಬೆಳೆಯಾಗಬೇಕು. ಅನ್ನದಾತರ ಬದುಕು ಹಸನಾಗಿ ಆರ್ಥಿಕ ಸ್ಥಿತಿ ಸುಧಾರಿಸಬೇಕು ಎಂಬ ಪ್ರಾರ್ಥನೆಯೊಂದಿಗೆ ಯಾತ್ರೆ ನಡೆಸಲಾಗುತ್ತಿದೆ ಎಂದರು.

ಮೊದಲ ದಿನ ಹೆಬ್ಬಾಳು ಗ್ರಾಮದಲ್ಲಿ ವಾಸ್ತವ್ಯ ಹೂಡಿರುವ ಶ್ರೀಗಳು ಹಾಗೂ ಭಕ್ತರು, ಮುಂದಿನ ಹಂತದಲ್ಲಿ ಹಳೇಬೀಡು, ಕಡೂರು ಮತ್ತು ಬೀರೂರು ಮಾರ್ಗವಾಗಿ ಅಜ್ಜಂಪುರ ತಲುಪಿ ಅಲ್ಲಿಂದ ಬುಕ್ಕಾಂಬುದಿ ತಪೋಕ್ಷೇತ್ರಕ್ಕೆ ತೆರಳಲಿದ್ದಾರೆ.

● ನ.2ರಂದು ಧಾರ್ಮಿಕ ಕಾರ್ಯಕ್ರಮ:

ಬುಕ್ಕಾಂಬುದಿ ತಪೋಕ್ಷೇತ್ರದಲ್ಲಿ ನ.2ರಂದು ರಂಭಾಪುರಿ ಜಗದ್ಗುರುಗಳ ದಿವ್ಯ ಸಾನ್ನಿಧ್ಯ ಹಾಗೂ ನೇತೃತ್ವದಲ್ಲಿ ಐದನೇ ವರ್ಷದ ಜಂಗಮ ಗಣಾರಾಧನೆಯ ಮಹಾಮಂಗಲ ಮತ್ತು ಮುಡಿ ಸಮರ್ಪಣೆ ಕಾರ್ಯಕ್ರಮ ನಡೆಯಲಿದೆ. ಶ್ರೀಮದುಜ್ಜಯಿನಿ ಸಿದ್ದಲಿಂಗ ಜಗದ್ಗುರುಗಳ ಮಂಗಲಮೂರ್ತಿಗೆ ಮಹಾರುದ್ರಾಭಿಷೇಕ ಹಾಗೂ ಧರ್ಮಜಾಗೃತಿ ಸಮಾರಂಭವೂ ಜರುಗಲಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಗುರುಗಳ ಆಶೀರ್ವಾದ ಪಡೆಯುವಂತೆ ಶ್ರೀಗಳು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಾರ್ಜುವಳ್ಳಿ ಮಠದ ಭಕ್ತ ಡಾ. ಜಯರಾಜ್, ಲೋಕಕಲ್ಯಾಣದ ಉದ್ದೇಶದಿಂದ ಶ್ರೀಗಳು ಕೈಗೊಂಡಿರುವ ಪಾದಯಾತ್ರೆ ಶ್ಲಾಘನೀಯ. ಇಂತಹ ಧಾರ್ಮಿಕ ಹಾಗೂ ಸಾಮಾಜಿ–ಕ ಕಾರ್ಯಗಳು ಜನರಲ್ಲಿ ಧರ್ಮನಿಷ್ಠೆ, ಸಹಬಾಳ್ವೆ ಮತ್ತು ಪರಸ್ಪರ ಪ್ರೀತಿಯ ಭಾವನೆ ಬೆಳೆಸಲು ಸಹಕಾರಿಯಾಗಿವೆ ಎಂದರು.

ದೇವರಾಜ ಶಾಸ್ತ್ರಿಗಳು ಸೇರಿದಂತೆ ವಿವಿಧ ಗ್ರಾಮಗಳ ಮಠದ ಸದ್ಭಕ್ತರು ಹಾಗೂ ನೂರಾರು ಭಕ್ತರು ಉಪಸ್ಥಿತ–ರಿದ್ದರು.

ನಿಗದಿತ ದರಕ್ಕಿಂತ ಹೆಚ್ಚು ಬೆಲೆಗೆ ಮದ್ಯ ಮಾರಾಟ: ಕ್ರಮಕ್ಕೆ ಆಗ್ರಹ

ಪ್ರಜಾ ಭಾರತ ವರದಿ

ಬೇಲೂರು: ತಾಲ್ಲೂಕಿನ ಮದ್ಯದಂಗಡಿಗಳಲ್ಲಿ ಸರ್ಕಾರ ನಿಗದಿಪಡಿಸಿರುವ ದರಕ್ಕಿಂತ ಹೆಚ್ಚಿನ ಬೆಲೆಗೆ ಮದ್ಯ ಮಾರಾಟ ಮಾಡಲಾಗುತ್ತಿದೆ ಎಂದು ಆರೋಪಿಸಿರುವ ಕರ್ನಾಟಕ ಮದ್ಯಪಾನ ಪ್ರಿಯರ ಸಂಘದ ತೋಟೇಶ್, ಈ ಅಕ್ರಮಕ್ಕೆ ಕಡಿವಾಣ ಹಾಕುವಂತೆ ಅಬಕಾರಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರನ್ನು ಆಗ್ರಹಿಸಿದ್ದಾರೆ.



ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಈ ಹಿಂದೆ ಶಾಸಕರಾಗಿದ್ದ ಸಂದರ್ಭದಲ್ಲಿ ಶಿವಲಿಂಗೇಗೌಡ ಅವರು ಸದನದಲ್ಲಿ ಈ ವಿಚಾರವಾಗಿ ಧ್ವನಿ ಎತ್ತಿದ್ದರು. ಆದರೆ ಈಗ ಅವರೇ ಅಬಕಾರಿ ಸಚಿವರಾಗಿದ್ದು, ತಮ್ಮ ತವರು ಜಿಲ್ಲೆಯಲ್ಲಿಯೇ ಹೆಚ್ಚಿನ ದರಕ್ಕೆ ಮದ್ಯ ಮಾರಾಟವಾಗುತ್ತಿದ್ದರೂ ಕ್ರಮ ಕೈಗೊಳ್ಳದಿರುವುದು ಏಕೆ ಎಂದು ಪ್ರಶ್ನಿಸಿದರು.

ಮದ್ಯದಂಗಡಿಗಳನ್ನು ಬೆಳಗ್ಗೆ ಬೇಗ ತೆರೆಯುವ ಕು–ರಿತು ಮಾತನಾಡುವ ಸಚಿವರು, ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ಮದ್ಯ ಮಾರಾಟ ಮಾಡುತ್ತಿರುವುದರ ವಿರುದ್ಧವೂ ಕ್ರಮ ಕೈಗೊಳ್ಳಬೇಕು. ಬೇಲೂರು ತಾಲ್ಲೂಕಿನ ವಿವಿಧ ಮದ್ಯದಂಗಡಿಗಳಲ್ಲಿ ಒಂದೊಂದು ದರ ವಸೂಲಿ ಮಾಡಲಾಗುತ್ತಿದೆ. ಸರ್ಕಾರವೇ ಎಲ್ಲ ಅಂಗಡಿಗಳಿಗೆ ಮದ್ಯ ಪೂರೈಸುತ್ತಿದ್ದರೂ ದರದಲ್ಲಿ ವ್ಯತ್ಯಾಸವೇಕೆ ಎಂದು ಆಕ್ರೋಶ ವ್ಯಕ್ತಪಡಿಸಿದರು.ಸರ್ಕಾರದ ಆದೇಶದಂತೆ ಮದ್ಯದಂಗಡಿಗಳಲ್ಲಿ ದರಪಟ್ಟಿ ಪ್ರದರ್ಶಿಸಬೇಕಿದ್ದರೂ, ಬಹುತೇಕ ಅಂಗಡಿಗಳಲ್ಲಿ ಅದನ್ನು ಅಳವಡಿಸಿಲ್ಲ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿದಿದ್ದರೂ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿದರು.

ಜಿಲ್ಲಾಧಿಕಾರಿಗಳು ಹಾಗೂ ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವ ಮೂಲಕ ಎಲ್ಲ ಮದ್ಯದಂಗಡಿಗಳಲ್ಲಿ ನಿಗದಿತ ದರಕ್ಕೆ ಮದ್ಯ ಮಾರಾಟವಾಗುವಂತೆ ಕ್ರಮ ಕೈಗೊಳ್ಳಬೇಕು. ಗ್ರಾಹಕರಿಂದ ಹೆಚ್ಚುವರಿ ಹಣ ವಸೂಲಿ ಮಾಡುವುದನ್ನು ತಡೆಯಬೇಕು ಎಂದು ತೋಟೇಶ್ ಒತ್ತಾಯಿಸಿದರು.

Printed, Published & Owned By Dinesh B G and Printed at Honalu Graphic, Word No. 2, Ashok Road Behind Stadium, Satyamangala Village, Vidya Nagara Hassan District, Karnataka - 573201 and Published at Ward No.1 Behind Budda School, Halebeedu Road Shanthi Nagara Bantenahalli Belur Taluk Hassan Dist, Karnataka - 573115 - Editor Dinesh B G